ದಿನಾಂಕಃ 21-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ** ಅರ್ಜಿದಾರರ ಪರ ಶ್ರೀ ಎನ್ ಬಿ ಯು ವಕೀಲರಿಂದ.

ನಾನು ನನ್ನ ಮುಖ್ಯ ವಿಚಾರಣೆಯ ಭಾಗಾಂಶವಾಗಿ ಸಾಕ್ಷ್ಯ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಸಂಗತಿಗಳು ಸರಿಯಾಗಿರುತ್ತವೆ.

ಬ್ಯಾಡಗಿ ಪೊಲೀಸ ಠಾಣೆಯ ಅಪರಾಧ ಸಂಖ್ಯೆಃ 13/2022 ರ ಪ್ರಥಮ ವರ್ತಮಾನ ವರದಿ ಹಾಗೂ ದೂರಿನ ದೃಢೀಕೃತ ನಕಲುಗಳನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ಕ್ರಮವಾಗಿ ನಿಪಿ-1 ಮತ್ತು ನಿಪಿ-2 ಎಂದು, ಅಪಘಾತ ಜಾಗೆಯ ಪಂಚನಾಮೆ, 4 ಪೋಟೋಗಳು, ಅಪಘಾತ ವಾಹನಗಳ ಜಪ್ತಿ ಪಂಚನಾಮೆ, 4 ಪೋಟೋಗಳು, ಮೋಟಾರು ವಾಹನ ಅಪಘಾತ ಪರೀಕ್ಷಾ ವರದಿ, ದೋಷಾರೋಪಣೆ ಪಟ್ಟಿ, ಗಾಯದ ಪ್ರಮಾಣ ಪತ್ರ ಇವುಗಳ ದೃಢೀಕೃತ ನಕಲುಗಳನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ನಿಪಿ-3 ರಿಂದ ನಿಪಿ-9 ಎಂದು, ಡಿಸ್ ಚಾರ್ಜ ಸಮರಿ ಹಾಜರುಪಡಿಸಿರುತ್ತೇನೆ ಅದನ್ನು ನಿಪಿ-10 ಎಂದು ಗುರುತಿಸಲಾಯಿತು. ಅಪರಾಧ ವಾಹನದ ವಾಹನ ಚಾಲಕನ ವಾಹನ ಚಾಲನೆ ಪರವಾನಿಗೆ ಪತ್ರ, ಆರ್ ಸಿ ಪುಸ್ತಕ, ವಿಮೆ ಇವುಗಳ ದೃಢೀಕೃತ ನಕಲುಗಳನ್ನು ಹಾಜರುಪಡಿಸಿರುತ್ತೇನೆ. ನನ್ನ ಆಧಾರ ಕಾರ್ಡ ದೃಢೀಕೃತ ನಕಲನ್ನು ಹಾಜರುಪಡಿಸಿರುತ್ತೇನೆ ನಿಪಿ-11 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಯನ್ನು ಅರ್ಜಿದಾರರ ಪರ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ.ಹೆ.ಕೆ.ಸರಿ.ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳಃ ಸವಣೂರ).